ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ.115/2024

ಸಿ.ಡಬ್ಲ್ಯೂ -08

ಪಿ.ಡಬ್ಲ್ಯೂ-06

ಸಾಕ್ಷಿದಾರನ ಹೆಸರು :- ವನಜಾಕ್ಷಿ

ಗಂಡನ ಹೆಸರು :- ಸೋಮಶೇಖರ್

ವಯಸ್ಸು :- 40 ವರ್ಷ

ಉದ್ಯೋಗ :- ಎಸ್.ಡಿ.ಎ ಯಡಿಯೂರು ಗ್ರಾಮಪಂಚಾಯಿತಿ

ವಾಸ :- ಮಾಗಡಿ

**<u>ಸಾಕ್ಷಿಗೆ ದಿಃ 05.05.2026 ರಂದು ಪ್ರಮಾಣ ವಚನ ಬೋದಿಸಲಾಯಿತು</u>.**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

2017 ರಿಂದ ಯಡಿಯೂರು ಗ್ರಾಮಪಂಚಾಯಿತಿಯಲ್ಲಿ ಎಸ್.ಡಿ.ಎ ಆಗಿ ಕೆಲಸ ಮಾಡುತ್ತಿದ್ದೇನೆ. ಪಿಡಿಓ ರವರು ರಜಾ ಇದ್ದ ಕಾರಣ ನಾನು ಪೊಲೀಸರ ಮನವಿ ಪತ್ರದ ಮೇರೆಗೆ ದಿಃ02.12.2023ರಂದು ಆಸ್ತಿ ಸಂಖ್ಯೆಃ105ಎ, 103ಪಿ ಸಿರಿವಂತಮ್ಮ ಕೋಂ ನಾಗಣ್ಣ ಅವರಿಗೆ ಸಂಬಂಧಿಸಿದಖಾತಾ ಎಕ್ಸ್ ಟ್ರಾಕ್ಟ್ ಅನ್ನು ನೀಡಿರುತ್ತೇನೆ. ಸದರಿ ದಾಖಲೆಗೆ ನನ್ನ ಸಹಿ ಇರುತ್ತದೆ. ಅದನ್ನು ನಿ.ಪಿ.5 ಎಂದು, ಸಹಿಯನು ನಿ.ಪಿ.5(ಎ) ಎಂದು ಗುರುತಿಸಲಾಯಿತು.

**<u>ಆರೋಪಿತರ ಪರಃ ಪಾಟೀ ಸವಾಲುಃ ಶ್ರೀ.ಟಿ.ಜಿ.ಟಿ.ವಕೀಲರಿಂದಃ</u>**

ಪಿಡಿಓ ರವರು ರಜಾ ಇದ್ದ ಕಾರಣ ನನಗೆ ಸಹಿ ಮಾಡಲು ಪ್ರಭಾರವನ್ನು ನೀಡಿದ್ದರು. ಖಾತಾ ಎಕ್ಸ್ ಟ್ರಾಕ್ಟ್ ಅನ್ನು ನೀಡಿದ್ದು ಯಾವುದೇ ಪತ್ರವನ್ನು ನೀಡಿರುವುದಿಲ್ಲ. ಸಿರಿವಂತಮ್ಮನವರಿಗೆ ಸೇರಿದ ಎಷ್ಟು ಮನೆ ಮತ್ತು ಸೈಟುಗಳಿವೆ ಎಂದು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಈ ಆಸ್ತಿಗೆ ಸಂಬಂಧಿಸಿದಂತೆ ಮಾತ್ರ ಕೋರಿದ್ದು ಬಿಲ್ ಕಲೆಕ್ಟರ್ ನೀಡಿದ ಮಾಹಿತಿ ಮೇರೆಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಖಾತಾ ಎಕ್ಸ್ ಟ್ರಾಕ್ಟ್

ನಲ್ಲಿ ಸೈಟು ಮತ್ತು ಮನೆ ಎಂದು ಇರುವ ಜಾಗದಲ್ಲಿ ನಿಖರವಾಗಿ ಬರೆಯುತ್ತೆವೆ ಎಂದರೆ ಸರಿ. ನಾನು ನೀಡಿರುವ ಖಾತಾ ಎಕ್ಸ್ ಟ್ರಾಕ್ಟ್ ಸೈಟ್ ಎಂದು ನಮೂದು ಇರುತ್ತದೆ ಎಂದರೆ ಸರಿ. ಪೊಲೀಸರು ಯಾವುದೇ ನೋಟಿಸು ನೀಡದೇ ಇದ್ದರೂ ನಾನು ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ಖಾತಾ ಎಕ್ಸ್ ಟ್ರಾಕ್ಟ್ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಕುಣಿಗಲ್.